## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 648 |
| 2 | ಸದಸ್ಯರ ಹೆಸರು | : | ಶ್ರೀ ಲಹರ್ ಸಿಂಗ್ ಸಿರೋಯ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 12-03-2016 |
| 4 | ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿರುವ ಬೀದಿನಾಯಿಗಳ ಸಂಖ್ಯೆ ಎಷ್ಟು; ವಲಯವಾರು ಮಾಹಿತಿಯನ್ನು ನೀಡುವುದು; | ಬೆಂಗಳೂರು ನಗರದಲ್ಲಿರುವ ಬೀದಿನಾಯಿಗಳ ಸಂಖ್ಯೆ: 309972 (ಪಾಲಿಕೆಯ ವತಿಯಿಂದ 2019ರಲ್ಲಿ ನಡೆಸಿದ ಸಮೀಕ್ಷೆಯ ಅಂದಾಜಿನಂತೆ) ಆಗಿದ್ದು, ವಲಯವಾರು ಮಾಹಿತಿಗಳು ಈ ಕೆಳಕಂಡಂತೆ ಇರುತ್ತದೆ. |

| ಕ್ರ.ಸಂ. | ವಲಯದ ಹೆಸರು | ಬೀದಿನಾಯಿಗಳ ಸಂಖ್ಯೆ |
|---|---|---|
| 1. | ಯಲಹಂಕ | 36217 |
| 2. | ರಾಜರಾಜೇಶ್ವರಿನಗರ | 52961 |
| 3. | ದಾಸರಹಳ್ಳಿ | 23170 |
| 4. | ಮಹದೇವಪುರ | 46334 |
| 5. | ಬೊಮ್ಮನಹಳ್ಳಿ | 38940 |
| 6. | ದಕ್ಷಿಣ | 39566 |
| 7. | ಪೂರ್ವ | 44303 |
| 8. | ಪಶ್ಚಿಮ | 28481 |
| | ಒಟ್ಟು | **309972** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಬೆಂಗಳೂರು ನಗರದಲ್ಲಿರುವ ಬೀದಿನಾಯಿಗಳ ಗಣತಿ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು; (ಪೂರ್ಣ ಮಾಹಿತಿಯನ್ನು ನೀಡುವುದು) | **1.** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶುಪಾಲನಾ ವಿಭಾಗ, WVS India, Mission Rabies ರವರ ಸಹಭಾಗಿತ್ವದಲ್ಲಿ ಸೆಪ್ಟೆಂಬರ್ 2019ರ ಮಾಹೆಯಲ್ಲಿ ಪಾಲಿಕೆಯ ಎಲ್ಲಾ ವಲಯಗಳಲ್ಲಿ ಮಾದರಿ ಸಮೀಕ್ಷೆ (Sample Survey) ಮಾದರಿಯಲ್ಲಿ ಬೀದಿನಾಯಿಗಳ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ.<br>**2.** ಪಾಲಿಕೆಯ ಪಶುಪಾಲನಾ ವಿಭಾಗದಿಂದ 10 Basic Sight Survey ತಂಡಗಳನ್ನು ಮತ್ತು 04 Resight Survey ತಂಡಗಳನ್ನು ರಚಿಸಿ, ಪ್ರತಿ ತಂಡದಲ್ಲಿ 2 ಹಿರಿಯ ಪಶುವೈದ್ಯಕೀಯ ಪರೀಕ್ಷಕರನ್ನು ಸಮೀಕ್ಷಕರನ್ನಾಗಿ ಹಾಗೂ 01 ಸಹಾಯಕ ನಿರ್ದೇಶಕರನ್ನು ಮೇಲ್ವಿಚಾರಣಾ ಅಧಿಕಾರಿಯನ್ನಾಗಿ ನೇಮಿಸಲಾಗಿತ್ತು.<br>**3.** Basic sight Survey ತಂಡದವರು ದಿನಕ್ಕೆ 10 ವಾರ್ಡ್‌ಗಳಂತೆ 20 ದಿನಗಳ ಕಾಲ 198 ವಾರ್ಡ್‌ಗಳ ಸಮೀಕ್ಷೆ ಕಾರ್ಯವನ್ನು ಕೈಗೊಂಡಿರುತ್ತಾರೆ. Resight Survey ತಂಡದವರು ಆಯ್ದ 20 ವಾರ್ಡ್‌ಗಳಲ್ಲಿ ಪ್ರತಿ ವಾರ್ಡ್‌ನಲ್ಲಿ 02 ಬಾರಿ ಸಮೀಕ್ಷೆ ಕಾರ್ಯ ಕೈಗೊಳ್ಳಲಾಗಿದೆ.<br>**4.** ಸಮೀಕ್ಷೆ ಕಾರ್ಯವನ್ನು WVS India, ರವರ WVS Street Dog Survey App ಉಪಯೋಗಿಸಿ GPS ತಂತ್ರಾಂಶವನ್ನು ಬಳಸಿ ಮೊಬೈಲ್ ಮತ್ತು ಟ್ಯಾಬ್‌ಗಳಲ್ಲಿ ಸಮೀಕ್ಷೆ ಕಾರ್ಯ ನಡೆಸಲಾಗಿರುತ್ತದೆ. |

| | | |
|---|---|---|
| ಇ) | ಇದುವರೆವಿಗೂ ಎಷ್ಟು ಬೀದಿನಾಯಿಗಳಿಗೆ ಸಂತಾನಹರಣ ಚಿಕಿತ್ಸೆ ಮಾಡಲಾಗಿರುತ್ತದೆ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಈ ತಹಲ್‌ವರೆವಿಗೂ ಬೀದಿನಾಯಿಗಳಿಗೆ ಸಂತಾನಹರಣ ಚಿಕಿತ್ಸೆ ಮಾಡಲಾಗಿರುವ ವಿವರಗಳು ಈ ಕೆಳಕಂಡಂತೆ ಇರುತ್ತದೆ. |

| ಕ್ರ.ಸಂ. | ಅವಧಿ | ಶಸ್ತ್ರಚಿಕಿತ್ಸೆ ಮಾಡಲಾದ ಬೀದಿ ನಾಯಿಗಳ ಸಂಖ್ಯೆ |
|---|---|---|
| 1. | 2000–01 | 9957 |
| 2. | 2001–02 | 16619 |
| 3. | 2002–03 | 17319 |
| 4. | 2003–04 | 30582 |
| 5. | 2004–05 | 32907 |
| 6. | 2005–06 | 35168 |
| 7. | 2006–07 | 29017 |
| 8. | 2007–08 | 52467 |
| 9. | 2008–09 | 42695 |
| 10. | 2009–10 | 29349 |
| 11. | 2010–11 | 69141 |
| 12. | 2011–12 | 93447 |
| 13. | 2012–13 | 61667 |
| 14. | 2013–14 | 52524 |
| 15. | 2014–15 | 30410 |
| 16. | 2015–16 | 35261 |
| 17. | 2016–17 | 8662 |
| 18. | 2017–18 | 35266 |
| 19. | 2018–19 | 46151 |
| 20. | 2019–2020 (ಜನವರಿ-2020ರ ವರೆಗೆ) | 31820 |
| ಒಟ್ಟು | | **760429** |

| | | |
|---|---|---|
| ಈ | ಬೀದಿ ನಾಯಿಗಳ ಹಾವಳಿ ಮತ್ತು ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬೀದಿ ನಾಯಿಗಳಿಗೆ ರೇಬೀಸ್ ರೋಗದ ವಿರುದ್ಧ ಎಆರ್‌ವಿ ಲಸಿಕೆಯನ್ನು ಹಾಕಿದ ನಂತರ ಆಯಿಲ್ ಪೈಂಟ್ (Oil Paint)ಅನ್ನು ಬಳಸಿ, ಲಸಿಕೆ ನೀಡಿದ ನಾಯಿಗಳನ್ನು ಗುರುತಿಸಲಾಗುತ್ತದೆ. ಆದರೆ, ಈ ಬಣ್ಣವು ಮೂರರಿಂದ ನಾಲ್ಕು ವಾರಗಳಷ್ಟು ಅವಧಿಗೆ ಮಾತ್ರ ಬಾಳಿಕೆ ಬರುತ್ತಿದ್ದು, ತದನಂತರ ಬಿಸಿಲು ಮಳೆಗೆ ಅಳಿಸಿ ಹೋಗುತ್ತಿರುವುದನ್ನು ಗಮನಿಸಲಾಗಿದ್ದು, ಇದಕ್ಕಾಗಿ ಬೀದಿ ನಾಯಿಗಳ ಕಿವಿಗಳ ಹಂಚಿನಲ್ಲಿ "V" ಆಕಾರದಲ್ಲಿ ಕತ್ತರಿಸಿದ ಗುರುತು ಶಾಶ್ವತವಾಗಿ ಇರುವಂತೆ ಗುರುತಿಸಿ, ಆ ನಾಯಿಗಳಿಗೆ ರೇಬೀಸ್ ರೋಗದ ವಿರುದ್ಧ ಲಸಿಕೆ ಹಾಕಿರುವುದು ಶಾಶ್ವತವಾಗಿ ಕಾಣುವಂತೆ ಮಾಡಲಾಗುತ್ತಿದೆ. |

| | | |
|---|---|---|
| | | ಬಿಬಿಎಂಪಿ ವತಿಯಿಂದ ರೇಬೀಸ್ ರೋಗದ ಬಗ್ಗೆ ಜಾಗೃತಿ ಮೂಡಿಸಲು ಈಗಾಗಲೇ ಶಾಲೆಗಳಲ್ಲಿ, ವಾರ್ಡ್ ಮಟ್ಟದ ಸಭೆಗಳಲ್ಲಿ, ಸಾರ್ವಜನಿಕ ಪ್ರಕಟಣೆಗಳ ಮುಖಾಂತರ ಹಾಗೂ ಕರಪತ್ರಗಳನ್ನು ಹಂಚುವ ಮೂಲಕ ಜಾಗೃತಿ ಮೂಡಿಸುವ ಕಾರ್ಯಕ್ರಮ ನಿರಂತರವಾಗಿ ಚಾಲ್ತಿಯಲ್ಲಿರುತ್ತದೆ. |

**ಸಂಖ್ಯೆ: ನಅಇ 35 ಎಂಎನ್‌ವೈ 2020**

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ.)

ಮುಖ್ಯಮಂತ್ರಿ